# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 192 | Pages. 2 | Date: 10-07-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 192 - ಪುಟಗಳು : 2 | 10-07-2026 ಶುಕ್ರವಾರ | Ph: 8762954248 | ದರ : ₹1


# ಜಿಲ್ಲೆಯಲ್ಲಿ ಬಿಡುವು ನೀಡಿದ ಮಳೆರಾಯ

## ಸಹಜ ಸ್ಥಿತಿಯತ್ತ ಜನಜೀವನ | ಜಲಾಶಯಕ್ಕೆ ಒಳಹರಿವು ಕಡಿಮೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳೆದ ನಾಲ್ಕು ದಿನಗಳಿಂದ ಎಡೆಬಿಡದೆ ಸುರಿದ ಧಾರಾಕಾರ ಮಳೆ ಗುರುವಾರ ಕೊಂಚ ಬಿಡುವು ನೀಡಿದ್ದು ಜನಜೀವನ ಸಹಜ ಸ್ಥಿತಿಯತ್ತ ಮರಳಿದೆ.

ಅಧಿಕ ಮಳೆಯಾಗುವ ಮಲೆನಾಡಿನ ಸಕಲೇಶಪುರ ಭಾಗದಲ್ಲೂ ಮಳೆ ಸುರಿಯಲಿಲ್ಲ. ಜನಜೀವನ ಎಂದಿನಂತೆ ಸಹಜ ಸ್ಥಿತಿಗೆ ಬಂದಿದೆ. ಆದರೆ ಕೃಷಿ ಚಟುವಟಿಕೆ ಚುರುಕುಗೊಳ್ಳಲು ಮಳೆಯ ಅವಶ್ಯಕತೆ ಹೆಚ್ಚಿದೆ. ಚನ್ನರಾಯಪಟ್ಟಣ, ಹೊಳೆರನಸೀಪುರ, ಅರಕಲಗೂಡು ಭಾಗದಲ್ಲೂ ಮೋಡ ಕವಿದ ವಾತಾವರಣ ನಿರ್ಮಾಣವಾಗಿ ದಿನಪೂರ್ತಿ ತಂಪು ಗಾಳಿ ಬೀಸಿತು. ಆಲೂರಿನಲ್ಲಿ ಬೆಳಿಗ್ಗೆ ಹೊತ್ತು ತುಂತುರು ಮಳೆಯಾಗಿದೆ.

ಮಳೆರಾಯನ ಮುನಿಸಿನಿಂದ ಹೇಮಾವತಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಕಡಿಮೆ ಆಗಿದೆ. ಬುಧವಾರ ಜಲಾಶಯಕ್ಕೆ 16,593 ಕ್ಯುಸೆಕ್ ನೀರು ಹರಿದು ಬರುತ್ತಿತ್ತು. ಗುರುವಾರ 15,647 ಕ್ಯುಸೆಕ್ ಗೆ ಇಳಿದಿದೆ.

2922.00 ಅಡಿ ಗರಿಷ್ಟ ಮಟ್ಟದ ಜಲಾಶಯದಲ್ಲಿ ಪ್ರಸ್ತುತ 2900.63 ಅಡಿ ನೀರಿದೆ. ಕಳೆದ ವರ್ಷ ಇದೇ ದಿನ 2919.82 ಅಡಿ ನೀರು ಸಂಗ್ರಹವಾಗಿತ್ತು. ಈ ಸಲ ಜಲಾಶಯ ಭರ್ತಿಗೆ ಇನ್ನೂ 21.37 ಅಡಿ ನೀರು ಹರಿದು ಬರಬೇಕಿದೆ. 37.103 ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ 20.102 ಟಿಎಂಸಿ ನೀರು ಬಂದಿದೆ.

ವಿದ್ಯುತ್ ಸಂಪರ್ಕ ಕಲ್ಪಿಸಲು ಗಡುವು:

ಸಕಲೇಶಪುರ: ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯದಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು, ವಾರದೊಳಗೆ ಸಮಸ್ಯೆ ಬಗೆಹರಿಸದಿದ್ದರೆ ಸಾವಿರಾರು ಜನರನ್ನು ಸೇರಿಸಿ ಸೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಎಚ್ಚರಿಕೆ ನೀಡಿದರು.

ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ನೇತೃತ್ವದಲ್ಲಿ ಗುರುವಾರ ಸೆಸ್ಕ್ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಮಾತನಾಡಿ, ನಿರಂತರ ವಿದ್ಯುತ್ ವ್ಯತ್ಯಯದಿಂದ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ವಿದ್ಯುತ್ ಇಲ್ಲದೆ ಮೋಟಾರ್‌ಗಳ ಮೂಲಕ ನೀರು ಪೂರೈಸಲು ಸಾಧ್ಯವಾಗದೆ ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿದರು.

ವಿದ್ಯುತ್ ಸಮಸ್ಯೆ ಕುರಿತು ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಪದೇ ಪದೇ ಕರೆ ಮಾಡಿದರೂ ದೂರವಾಣಿ ಸ್ವೀಕರಿಸುತ್ತಿಲ್ಲ. ಕೆಲವೊಮ್ಮೆ ಕರೆ ಸ್ವೀಕರಿಸಿದರೂ ಜವಾಬ್ದಾರಿಯುತವಾಗಿ ಸ್ಪಂದಿಸುತ್ತಿಲ್ಲ. ಜನರ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ನಿರ್ಲಕ್ಷ್ಯ ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸೆಸ್ಕ್‌ನಲ್ಲಿ ಭ್ರಷ್ಟಾಚಾರ, ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಸಮನ್ವಯ ಕೊರತೆಯಿಂದ ವಿದ್ಯುತ್ ವಿತರಣಾ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಅಧಿಕಾರಿಗಳಿಗೆ ಎಂಟು ದಿನಗಳ ಗಡುವು ನೀಡಲಾಗಿದೆ.

ಈ ಅವಧಿಯಲ್ಲಿ ಪರಿಸ್ಥಿತಿ ಸುಧಾರಿಸದಿದ್ದರೆ ಸತ್ಯಾಗ್ರಹ ನಡೆಸಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಅಮಾನತು ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. ಜೊತೆಗೆ ಇಂಧನ ಸಚಿವರನ್ನು ಭೇಟಿ ಮಾಡಿ ತಾಲೂಕಿನ ವಿದ್ಯುತ್ ಸಮಸ್ಯೆಗಳ ಕುರಿತು ಮನವರಿಕೆ ಮಾಡಿಕೊಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಪ್ರೇಮ್‌ನಾಥ್, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಮೋಹನ್, ತಾಲ್ಲೂಕು ಉಪಾಧ್ಯಕ್ಷ ಸೋಮಶೇಖರ್ ಮತ್ತಿತರರಿದ್ದರು.



## ಶಿರಾಡಿ ಘಾಟ್ ಅಪಾಯಕಾರಿ ಸ್ಥಳಕ್ಕೆ ಎಸ್ಪಿ ಭೇಟಿ

ಜಿಲ್ಲೆಯ ಶಿರಾಡಿ ಘಾಟ್‌ನ ಹಲವು ಪ್ರದೇಶಗಳಲ್ಲಿ ಭೂಕುಸಿತದ ಭೀತಿ ಎದುರಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ಸಂಭವನೀಯ ಅಪಾಯದ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿದರು

ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಅವರು, ಹಿಂದೆ ಶಿರಾಡಿ ಘಾಟ್‌ನಲ್ಲಿ 17 ಸ್ಥಳಗಳಲ್ಲಿ ಪದೇ ಪದೇ ಭೂಕುಸಿತ ಸಂಭವಿಸುತ್ತಿತ್ತು. ರಸ್ತೆ ಕಾಮಗಾರಿ ಪೂರ್ಣಗೊಂಡ ನಂತರ ಆ ಸಂಖ್ಯೆ ಐದಕ್ಕೆ ಇಳಿದಿದೆ ಎಂದು ತಿಳಿಸಿದರು.

ಯಾವುದೇ ಅವಘಡ ಸಂಭವಿಸಿದರೂ ತಕ್ಷಣ ಕ್ರಮ ಕೈಗೊಳ್ಳಲು ಪೊಲೀಸ್ ಹಾಗೂ ಹೆದ್ದಾರಿ ಪ್ರಾಧಿಕಾರದ ತಂಡಗಳು ಸಜ್ಜಾಗಿವೆ. ನಾಲ್ಕು ಜೆಸಿಬಿ, ಎರಡು ಹಿಟಾಚಿ, ಸಿಬ್ಬಂದಿಯ ಸಂಚಾರಕ್ಕೆ ಅಗತ್ಯ ವಾಹನ ಹಾಗೂ 24 ಗಂಟೆಯೂ ಅಂಬುಲೆನ್ಸ್ ಸಿದ್ಧ ಸ್ಥಿತಿಯಲ್ಲಿ ಇರಿಸಲಾಗಿದ್ದು, ಸಕಲೇಶಪುರ ಡಿವೈಎಸ್‌ಪಿ ನೇತೃತ್ವದಲ್ಲಿ ವಿಶೇಷ



ತಂಡ ಕಾರ್ಯಾಚರಣೆಗೆ ಸಜ್ಜಾಗಿದೆ ಎಂದರು. ಕಪ್ಪಳ್ಳಿ, ದೊಡ್ಡತಪ್ಲು, ಹೆಗ್ಗದ್ದೆ ಸೇರಿ ಹಲವು ಅಪಾಯಕಾರಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಶುಭಾನ್ವಿತಾ, ಅಪಾಯದ ಸ್ಥಳಗಳಲ್ಲಿ ಸಂಚರಿಸುವ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಹಾಗೂ ಪೊಲೀಸ್ ಇಲಾಖೆ ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

## ಸೆಸ್ಕ್ ಸಿಬ್ಬಂದಿ ವಾಹನ ಅಟ್ಟಾಡಿಸಿದ ಕಾಡಾನೆ

ಮಳೆಗಾಲ ಹಿನ್ನಲೆಯಲ್ಲಿ ಬುಧವಾರ ತಡರಾತ್ರಿ ವಿದ್ಯುತ್ ಲೈನ್ ದುರಸ್ತಿ ಕೆಲಸ ಮುಗಿಸಿ ಮನೆಗೆ ವಾಪಾಸ್ಸಾಗುತ್ತಿದ್ದ ಸೆಸ್ಕ್ ವಾಹನದ ಮೇಲೆ ಒಂಟಿ ಸಲಗ ದಾಳಿ ನಡೆಸಿರುವ ಘಟನೆ ಸಕಲೇಶಪುರ ತಾಲ್ಲೂಕಿನ ಲಕ್ಕುಂದ ಸಮೀಪ ನಡೆದಿದೆ.

ಸೆಸ್ಕ್ ಯಸಳೂರು ವಲಯ ವ್ಯಾಪ್ತಿಯ ಶಾಖಾಧಿಕಾರಿ ಮಂಜುನಾಥ್ ಹಾಗೂ ನಾಲ್ವರು ಲೈನ್‌ಮೆನ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ರಸ್ತೆಯ ಪಕ್ಕದಲ್ಲಿದಲ್ಲೇ ನಿಂತಿದ್ದ ಒಂಟಿ ಸಲಗ ಏಕಾಏಕಿ ವಾಹನದ ದಾಳಿ ಮಾಡಲು ಮುಂದಾಗಿದೆ. ಈ ದೃಶ್ಯ ವಾಹನದ ಡ್ಯಾಶ್ ಕ್ಯಾಮರಾದಲ್ಲಿ ಸೆರೆಯಾಗಿದೆ.

ಬುಧವಾರ ತಡ ರಾತ್ರಿ 1.30ರ ಸುಮಾರಿಗೆ ಈ ಘಟನೆ ನಡೆದಿದ್ದು, ಸಮಯ ಪ್ರಜ್ಞೆಯಿಂದ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ರಸ್ತೆ ಬದಿ ಕಾಡಾನೆ ತನ್ನ ಪಾಡಿಗೆ ತಾನು ಹೋಗುತ್ತಿತ್ತು. ಆದರೆ ಚಾಲಕನೇ ಅದರ ಹತ್ತಿರಕ್ಕೆ ಹೋಗಿದ್ದರಿಂದ ಆನೆ ಆಕ್ರೋಶದಿಂದ ಬೆನ್ನಟ್ಟಿದೆ. ಚಾಲಕ ಅದೇ ವೇಗದಲ್ಲಿ ಹಿಮ್ಮುಖವಾಗಿ ವಾಹನ ಚಲಾಯಿಸಿದ್ದರಿಂದ ಕಾಡಾನೆ ತನ್ನ ಪಾಡಿಗೆ ತಾನು ಹೋಗಿದೆ.


ಮತ್ತೊಂದು ಘಟನೆಯಲ್ಲಿ ಬೇಲೂರು ತಾಲ್ಲೂಕಿನ ಕಣಗುಪ್ಪೆ ಗ್ರಾಮದಲ್ಲಿ ವೃದ್ಧರೊಬ್ಬರು ಕೂದಲೆಳೆ



ಅಂತರದಲ್ಲಿ ಕಾಡಾನೆ ದಾಳಿಯಿಂದ ಪಾರಾಗಿದ್ದಾರೆ. ಸಿದ್ದಶೆಟ್ಟಿ (65) ಎಂಬುವರೇ ಸಣ್ಣಪುಟ್ಟ ಗಾಯಗಳಿಂದ ಬಳಲುತ್ತಿದ್ದಾರೆ.

ಸಿದ್ದಶೆಟ್ಟಿ ಅವರು ಎಂದಿನಂತೆ ಮನೆಯ ಮುಂದೆ ಮೇಯಲು ಜಾನುವಾರುಗಳನ್ನು ಕಟ್ಟುತ್ತಿದ್ದ ವೇಳೆ ಏಕಾಏಕಿ ಸಲಗ ಸೊಂಡಿಲಿನಿಂದ ಎತ್ತಿ ಬಿಸಾಡಿದೆ. ಕೂಡಲೇ ಗಾಯಾಳುವನ್ನು ತಾಲೂಕು ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಆಸ್ಪತ್ರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಗಾಯಾಳುವಿನ ಆರೋಗ್ಯ ವಿಚಾರಿಸಿದರು.

## ದೊಡ್ಡಪ್ಪನಿಂದಲೇ ಬಾಲಕಿ ಮೇಲೆ ಅತ್ಯಾಚಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಮೂರು ವರ್ಷದ ಮಗುವಿನ ಮೇಲೆ ದೊಡ್ಡಪ್ಪನೇ ಲೈಂಗಿಕ ದೌರ್ಜನ್ಯ ಎಸಗಿದ್ದಾನೆಂಬ ಆರೋಪ ಕೇಳಿಬಂದಿದೆ.

ಸಣ್ಣಸ್ವಾಮಿ (48) ಬಂಧಿತ ಆರೋಪಿ. ಬಾಲಕಿ ಮನೆಯ ಪಕ್ಕದಲ್ಲೇ ಇದ್ದ ಸಣ್ಣಸ್ವಾಮಿ ಆಟವಾಡಲು ತೆರಳಿದ್ದ ಮಗುವಿನ ಮೇಲೆ ಅತ್ಯಾಚಾರ ಎಸಗಿದ್ದಾನೆ ಎನ್ನಲಾಗಿದೆ. ಮನೆಗೆ ಬಂದ ಮಗುವಿನ ಪ್ಯಾಂಟ್‌ನ ಖಾಸಗಿ ಅಂಗದ ಹತ್ತಿರ ರಕ್ತದ ಕಲೆ ಆಗಿರುವುದು ಕಂಡುಬಂದಿದ್ದು ಆಗ ಮಗುವಿನ ತಾಯಿ ವಿಚಾರಿಸಿದಾಗ ದೊಡ್ಡಪ್ಪನ ಪೈಶಾಚಿಕ ಕೃತ್ಯ ಬಿಚ್ಚಿಟ್ಟಿದ್ದಾಳೆ. ತಕ್ಷಣವೇ ಕೊಣನೂರು ಸರ್ಕಾರಿ ಆಸ್ಪತ್ರೆಯ ವೈದ್ಯರು ಪರೀಕ್ಷೆ ಮಾಡಿ ಹಾಸನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರಿಂದ ಪೋಷಕರು ತಮ್ಮ ಮಗಳನ್ನು ಹಿಮ್ಸ್‌ಗೆ ದಾಖಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡ ಕೊಣನೂರು ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿ ಪೋಕ್ಸೋ ಸೇರಿ ಸಂಬಧಿತ ಕಾನೂನುಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಪ್ರತ್ಯೇಕ ಅಪಘಾತ: ಇಬ್ಬರು ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೊಳೆನರಸೀಪುರ ಹಾಗೂ ಹಾಸನ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಹೊಳೆನರಸೀಪುರ ತಾಲ್ಲೂಕಿನ ಚಿಕ್ಕಕೆರೆ ಹಳ್ಳದ ಸಮೀಪ ನಡೆದಿದೆ. ನಾಯಕನಹಳ್ಳಿ ಗ್ರಾಮದ ರಂಗಸ್ವಾಮಿ ಮೃತರು. ಜು. 8ರ ಬುಧವಾರ ಆಳೂರು ಮಾರಮ್ಮ ದೇವಸ್ಥಾನದಲ್ಲಿ ಪೂಜೆ ಮುಗಿಸಿಕೊಂಡು ಮನೆಗೆ ಬರುತ್ತಿದ್ದಾಗ ಹೊಳೇನರಸೀಪುರ ಕಡೆಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಅಪರಿಚಿತ ವಾಹನ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಹಾಸನ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ಗಾಣಿಗರ ಹೊಸಹಳ್ಳಿ ಸಮೀಪ ನಡೆದಿದೆ. ಗ್ರಾಮದ ಸ್ವಾಮಿಗೌಡ ಮೃತರು. ಗಾಣಿಗರ ಹೊಸಹಳ್ಳಿ ಗ್ರಾಮದ ಪಶು ಆಸ್ಪತ್ರೆ ಹತ್ತಿರ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದಾಗ ವೇಗವಾಗಿ ಬಂದ ಅಪರಿಚಿತ ವಾಹನ ಡಿಕ್ಕಿಯಾಗಿ ಮೃತಪಟ್ಟಿದ್ದಾರೆ.

## ಅರ್ಹರಿಗೆ ನಿವೇಶನ ಹಂಚಿಕೆಗೆ ಕ್ರಮ: ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹಂಪಾಪುರ ಬಳಿ ಮೀಸಲಿರಿಸಿರುವ 353 ಆಶ್ರಯ ನಿವೇಶನಗಳನ್ನು ಸರ್ಕಾರದ ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ವಿತರಿಸಲಾಗುವುದು ಎಂದು ಶಾಸಕ ಎ. ಮಂಜು ತಿಳಿಸಿದರು.

ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಆಶ್ರಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ 353 ಆಶ್ರಯ ನಿವೇಶನಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಕಾನೂನು ಪ್ರಕಾರ ಅರ್ಹರಾಗಿರುವ ಎಲ್ಲರಿಗೂ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಈ ಹಿಂದೆ ಅರ್ಜಿ



ಸಲ್ಲಿಸಿದ್ದವರೂ ಸಹ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗಿದೆ ಎಂದು ಶಾಸಕ ಎ.ಮಂಜು ಸ್ಪಷ್ಟಪಡಿಸಿದರು.

ಹಳೆಯ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸರ್ಕಾರದ ಪ್ರಸ್ತುತ ಮಾರ್ಗಸೂಚಿಗಳ ಪ್ರಕಾರ ಅರ್ಹರನ್ನು ಆಯ್ಕೆ ಮಾಡಿ ನಿವೇಶನ ಹಂಚಿಕೆ ಮಾಡಲಾಗುವುದು. ಎಸ್‌ಸಿ ಮತ್ತು ಎಸ್‌ಟಿ, ಮಹಿಳೆಯರು, ಅಂಗವಿಕಲರು ಹಾಗೂ ಸೈನಿಕರಿಗೆ ಸರ್ಕಾರ ನಿಗದಿಪಡಿಸಿರುವ ಮೀಸಲಾತಿ ಪ್ರಮಾಣದಂತೆ ಅರ್ಜಿಗಳನ್ನು ಪರಿಶೀಲಿಸಿ, ಅರ್ಹತಾ ಮಾನದಂಡಗಳನ್ನು ಪೂರೈಸುವವರಿಗೆ ಮಾತ್ರ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಸಮಿತಿ ಸದಸ್ಯರಾದ ವಿಜಯ್ ಕುಮಾರ್ ಹಾಗೂ ಮುಸಾವಿರ್ ಪಾಷಾ ಅವರು, ಈ ಹಿಂದೆ ಸಿದ್ಧಪಡಿಸಿದ್ದ ಆಯ್ಕೆ ಪಟ್ಟಿಯನ್ನೇ ಪರಿಗಣಿಸುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್ ಸರ್ಕಾರದ ನಿಯಮಾನುಸಾರ ಅರ್ಜಿಗಳನ್ನು ಆರು ತಿಂಗಳೊಳಗೆ ಪ್ರಕ್ರಿಯೆಗೊಳಿಸಬೇಕು. ಆ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳದ ಅರ್ಜಿಗಳನ್ನು ಸರ್ಕಾರ ಪರಿಗಣಿಸುವುದಿಲ್ಲ ಎಂದು ತಿಳಿಸಿದರು. ಅಲ್ಲದೆ, ಹಿಂದಿನ ವರ್ಷಗಳ ಆದಾಯ ಮಿತಿ, ಮೀಸಲಾತಿ ಹಾಗೂ ಇತರೆ ಅರ್ಹತಾ ಮಾನದಂಡಗಳಲ್ಲಿ ಬದಲಾವಣೆಗಳಾಗಿರುವುದರಿಂದ ಪ್ರಸ್ತುತ ಸರ್ಕಾರದ ಮಾರ್ಗಸೂಚಿಗಳ ಅನ್ವಯ ಹೊಸ ಅರ್ಜಿಗಳನ್ನೇ ಪರಿಗಣಿಸಲಾಗುವುದು ಎಂದರು.

ಅರ್ಜಿ ಸಲ್ಲಿಸಲು ಅಗತ್ಯವಾದ ಮಾನದಂಡಗಳ ಕುರಿತು ಫ್ಲೆಕ್ಸ್ ಅನ್ನು ಪಟ್ಟಣದಲ್ಲಿ ಅಳವಡಿಸಲಾಗುವುದು. ಅದರ ಆಧಾರದಲ್ಲಿ ಸಾರ್ವಜನಿಕರು ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು.

ಸಭೆಯಲ್ಲಿ ಸಮಿತಿ ಸದಸ್ಯೆ ರಾಧಾ, ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿ ಹಾಗೂ ತಹಶೀಲ್ದಾರ್ ಸೌಮ್ಯ, ತಾಪಂ ಇಒ ಶ್ರೀನಿವಾಸ್ ಇದ್ದರು.

## ಒಪಿಎಸ್ ಜಾರಿಗೆ ಆಗ್ರಹಿಸಿ ನಾಳೆ ಬೆಂಗಳೂರಿನಲ್ಲಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೆ ಆಗ್ರಹಿಸಿ ಜು.11 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಪ್ರತಿಭಟನೆಗೆ ಸರ್ಕಾರಿ ನೌಕರರು, ವಿವಿಧ ಸಂಘಟನೆಗಳು ಹಾಗೂ ಸಾರ್ವಜನಿಕರು ಬೆಂಬಲ ನೀಡುವಂತೆ ರಾಜ್ಯ ಸರ್ಕಾರಿ ಮಹಿಳಾ ನೌಕರ ಸಂಘದ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷೆ ವೀಣಾ ಕೋರಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಹಾಗೂ ಅಖಿಲ ಕರ್ನಾಟಕ (ಎನ್‌ಪಿಸ್) ನೌಕರರ ಸಂಘದ ರಾಜ್ಯಾಧ್ಯಕ್ಷ ನಾಗನಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಶೈಲಜಾ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ನಿವೃತ್ತಿಯ ಬಳಿಕ ನೆಮ್ಮದಿಯ ಬದುಕು ಸಾಗಿಸಲು ಹಳೆ ಪಿಂಚಣಿ ಯೋಜನೆ (ಒಪಿಎಸ್) ಅತ್ಯಗತ್ಯವಾಗಿದೆ. ಇದು ಸರ್ಕಾರಿ ನೌಕರರ ನ್ಯಾಯಸಮ್ಮತ ಮತ್ತು ಬಹುಕಾಲದ ಬೇಡಿಕೆಯಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಯಾವುದೇ ವಿಳಂಬ ಮಾಡದೆ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಪಡಿಸಿ, ಒಪಿಎಸ್ ಅನ್ನು ಶೀಘ್ರವಾಗಿ ಜಾರಿಗೊಳಿಸಬೇಕು. ನಿವೃತ್ತ ನೌಕರರ ಆರ್ಥಿಕ ಭದ್ರತೆ ಹಾಗೂ ಗೌರವಯುತ ಜೀವನವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುವ ನಿಟ್ಟಿನಲ್ಲಿ ಈ ನಮ್ಮ ಹೋರಾಟ ನಡೆಯಲಿದೆ. ದಯವಿಟ್ಟು ಪ್ರತಿಯೊಬ್ಬ ನೌಕರರು ಈ ಪ್ರತಿಭಟನೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕೋರಿದ್ದಾರೆ.

## ಶಾಲಾ-ಕಾಲೇಜು ಕಟ್ಟಡಗಳ ದುರಸ್ತಿಗೆ ಕ್ರಮ ವಹಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಳೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ಶಾಲಾ ಕಾಲೇಜು ಹಾಗೂ ಅಂಗನವಾಡಿ ಕಟ್ಟಡಗಳ ದುರಸ್ತಿಗೆ ಕ್ರಮ ವಹಿಸುವಂತೆ ಶಾಸಕ ಹೆಚ್.ಪಿ. ಸ್ವರೂಪ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಳೆ ಹಾನಿಗೆ ಸಂಬಂಧಿಸಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ವಾಡಿಕೆಯಂತೆ 193 ಮಿಲಿ ಮೀಟರ್ ಮಳೆ ಆಗಬೇಕಿತ್ತು. ಆದರೆ 188 ಮಿಲಿ ಮೀಟರ್ ಮಳೆಯಾಗಿದ್ದು ಶೇ. 33ರಷ್ಟು ಮಳೆ ಕೊರತೆಯಾಗಿದೆ. ಹಾಸನ ಜಿಲ್ಲೆಯ ಪ್ರಮುಖ ವಾಣಿಜ್ಯ



ಬೆಳೆಯಾಗಿರುವ ಆಲೂಗಡ್ಡೆ ಕಳೆದ ಬಾರಿ 4 ಸಾವಿರ ಹೆಕ್ಟೇರ್ ನಲ್ಲಿ ಬಿತ್ತನೆ ಆಗಿತ್ತು ಆದರೆ ಈ ಬಾರಿ ಕೇವಲ 2 ಸಾವಿರ ಹೆಕ್ಟೇರ್ ನಲ್ಲಿ ಬಿತ್ತನೆ ಆಗಿದೆ. ಒಂದೇ ರೀತಿಯ ಬೆಳೆ ಬೆಳೆಯುವ ಬದಲಾಗಿ ಮಿಶ್ರ ಬೆಳೆ ಮಾಡಲು ರೈತರಿಗೆ ಕೃಷಿ ಇಲಾಖೆಯಿಂದ ಸಲಹೆ ನೀಡಲಾಗಿದೆ ಎಂದು ತಿಳಿಸಿದರು.

ಮಳೆಯಿಂದ ಹಾನಿಯಾಗಿರುವ ರಸ್ತೆಗಳು ಹಾಗೂ ಸರ್ಕಾರಿ ಕಟ್ಟಡಗಳ ಬಗ್ಗೆ ಶೀಘ್ರವಾಗಿ ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡಿ ತಹಸೀಲ್ದಾರ್ ಅವರ ಪರಿಹಾರ ನಿಧಿ ಖಾತೆಯಲ್ಲಿನ ಹಣವನ್ನು ದುರಸ್ತಿ ಕಾರ್ಯಕ್ಕೆ ಬಳಸಿಕೊಳ್ಳಲು ಅವಕಾಶವಿದೆ ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಸೂಚಿಸಿದರಲ್ಲದೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರ ವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಗತ್ಯವಿರುವ ಕಡೆಗಳಲ್ಲಿ ಹಾಗೂ ಸರ್ಕಾರಿ ಕಚೇರಿ ಆವರಣಗಳಲ್ಲಿ ಗಿಡ ನೆಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಹಾಸನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಸಿರೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.

ತಹಸೀಲ್ದಾರ್ ಗೀತಾ, ತಾಪಂ ಕಾರ್ಯನಿರ್ವಹಣಾಧಿಕಾರಿ ಗಿರೀಶ್ ಮತ್ತಿತರರಿದ್ದರು.

# ಸರ್ಕಾರಿ ಶಾಲೆ ಶಿಕ್ಷಕಿ ವಿರುದ್ಧ ವಿದ್ಯಾರ್ಥಿಗಳ ಗಂಭೀರ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಶಿಕ್ಷಕಿಯೊಬ್ಬರು ವಿದ್ಯಾರ್ಥಿಗಳಿಗೆ ಜಾತಿ ನಿಂದನೆ ಮಾಡಿ ನಿರಂತರ ಹಲ್ಲೆ, ಕಿರುಕುಳ ನೀಡುತ್ತಿದ್ದಾರೆಂಬ ಗಂಭೀರ ಆರೋಪ ಕೇಳಿಬಂದಿದೆ.

ಕನ್ನಡ ವಿಷಯದ ಸಹ ಶಿಕ್ಷಕಿ ಹೆಚ್.ಕೆ.ಕುಸುಮಾ ವಿರುದ್ಧ ವಿದ್ಯಾರ್ಥಿ ಹಾಗೂ ಪೋಷಕರು ದೂರಿದ್ದು, ಅವರ ವರ್ಗಾವಣೆಗೆ ಆಗ್ರಹಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗೆ ಆಗ್ರಹಿಸಿದ್ದಾರೆ.

ಘಟನೆ ಕುರಿತು ವಿದ್ಯಾರ್ಥಿ ಗೋಪಾಲಕೃಷ್ಣ ಮಾತನಾಡಿ, ಶಾಲೆಗೆ ಬಂದಾಗ ಹೋಮ್ ವರ್ಕ್ ಎರಡು ನಿಮಿಷ ತಡವಾಗಿ ಇಟ್ಟಿದ್ದಕ್ಕೆ ನನಗೆ ಕಾಪಾಳಕ್ಕೆ ಹೊಡೆದು ನಮ್ಮ ಅಪ್ಪ ಅಮ್ಮನಿಗೆ ಬೈಯ್ದರು. ಬಿಟ್ಟಿ ಮೊಟ್ಟೆ ಊಟಕ್ಕೆ ಬರುತ್ತೀರಾ ನೀವು ಹೊಲಸು ಜಾತಿಯವರು. ನಿಮ್ಮಿಂದ ನಾನು ಆಸ್ಪತ್ರೆಗೆ ಹೋಗಿ ಎಂಟು ಸಾವಿರ ರೂ. ಮಾತ್ರೆ ತೆಗೆದುಕೊಳ್ಳಬೇಕಾಯಿತು. ನಿಮ್ಮ ಅಪ್ಪ-ಅಮ್ಮನಿಗೆ ಬಂದು ಪಾಠ ಮಾಡೋಕೆ ಹೇಳಿ ಎಂದು ಹೇಳುತ್ತಾರೆ. ತುಂಬಾ ಕೆಟ್ಟದಾಗಿ ಮಾತುನಾಡುತ್ತಾರೆ. ನಮಗೆ ಕನ್ನಡದಲ್ಲಿ ಏನು ಪಾಠಗಳನ್ನೇ ಮಾಡಿಲ್ಲ. ನಿತ್ಯ ಬಂದರೆ ಅವರ ಸಮಯ ಮುಗಿಯುವವರೆಗೂ ಬೈದು ಜಗಳವಾಡಿ



ಹೋಗುತ್ತಾರೆಂದು ಅಸಮಾಧಾನ ವ್ಯಕ್ತಪಡಿಸಿದ.

ವಿದ್ಯಾರ್ಥಿನಿ ಗಾನವಿ ಮಾತಾನಾಡಿ, ವಿದ್ಯಾರ್ಥಿನಿಯರು ಎಂಬುದನ್ನು ಗಮನಿಸದೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಬಿಟ್ಟಿ ತಿನ್ನುವುದಕ್ಕೆ ಬರುತ್ತೀರಾ ಎನ್ನುತ್ತಾರೆ. ಪ್ರಾಂಶುಪಾಲರಿಗೆ ದೂರು ನೀಡಲು ಹೋದರೆ ನಾನು ನಿಮ್ಮ ಹೆಸರು ಬರೆದಿಟ್ಟು ನೇಣು ಹಾಕಿಕೊಳ್ಳುತ್ತೇನೆ, ವಿಷ ಕುಡಿಯುತ್ತೇನೆ ಎಂದು ಹೆದರಿಸುತ್ತಾರೆ. ಹಲವಾರು ಬಾರಿ ಶಾಲೆಯ ಮುಖ್ಯೋಪಾಧ್ಯಾಯ ಹಾಗು ಶಿಕ್ಷಣಾಧಿಕಾರಿ ತಹಶೀಲ್ದಾರ್ ಅವರು ಬಂದು ಯಾರು ಕೂಡ ಕ್ರಮ ಕೈಗೊಂಡಿಲ್ಲ. ಮಕ್ಕಳ ಸಹಾಯವಾಣಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದರು.

ಪೋಷಕರು ಮಾತನಾಡಿ, ವಿದ್ಯಾರ್ಜನೆಗಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸಿದರೆ ಶಿಕ್ಷಕಿ ಮಕ್ಕಳಿಗೆ ಬಾಯಿಗೆ ಬಂದಂತೆ ಬೈಯ್ಯುತ್ತಾರೆಂದು ಮನೆಗೆ ಬಂದು ದೂರು ಹೇಳುತ್ತಾರೆ. ಯಾವ ಮಕ್ಕಳಾದರೂ ಶಿಕ್ಷಕಿ ಬೈಯ್ಯುವ ಮಾತುಗಳನ್ನು ಮನಸ್ಸಿಗೆ ತೆಗೆದುಕೊಂಡು ಏನಾದರೂ ಅನಾಹುತ ಮಾಡಿಕೊಂಡರೆ ಅದಕ್ಕೆ ನೇರ ಕಾರಣ ಶಿಕ್ಷಕಿ ಕುಸುಮಾ ಎಂದು ಆರೋಪಿಸಿದರು.

ಈ ಶಿಕ್ಷಕಿಯಿಂದ ಶಾಲೆಯ ವಾತಾವರಣ ಹಾಳಾಗಿದೆ. ನಾಲ್ಕು ವರ್ಷಗಳಿಂದ ಶಿಕ್ಷಕಿ ವಿರುದ್ಧ ದೂರುಗಳು ಕೇಳಿಬರುತ್ತಿವೆ. ಕೂಡಲೇ ಅವರನ್ನು ಶಾಲೆಯಿಂದ ವರ್ಗಾವಣೆ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂಬಂಧ ಪ್ರತಿಕ್ರಿಯಿಸಿದ ಸಹ ಶಿಕ್ಷಕಿ ಹೆಚ್.ಕೆ.ಕುಸುಮಾ ಅವರು, ಮಕ್ಕಳು ಕೊಟ್ಟಂತಹ ಹೋಮ್ ವರ್ಕ್‌ನ್ನು ಸರಿಯಾಗಿ ಮಾಡುವುದಿಲ್ಲ. ಬೆಳಿಗ್ಗೆ ಹೇಳಿದ ಕೆಲಸ ಸಂಜೆ ಮಾಡುತ್ತಾರೆ. ಶಿಕ್ಷಕಿಯಾಗಿ ಇದನ್ನು ಪ್ರಶ್ನಿಸುವುದು ನನ್ನ ಕರ್ತವ್ಯ. ಜಾತಿ ನಿಂದನೆ ಹಾಗು ಹಲ್ಲೆ ಮಾಡಿದ್ದೇನೆಂಬ ಆರೋಪಗಳೆಲ್ಲಾ ಸುಳ್ಳು. ಉದ್ದೇಶಪೂರ್ವಕವಾಗಿ ನನ್ನ ವಿರುದ್ಧ ಹಗೆತನ ಸಾಧಿಸುತ್ತಿದ್ದಾರೆ ಎಂದು ಪ್ರತಿಕ್ರಿಯಿಸಿದರು.

# ರೈಲಿನಲ್ಲೇ ಹೆರಿಗೆ ಮಾಡಿಸಿದ ಯುವ ವೈದ್ಯರು



ಹಾಸನ: ಚಲಿಸುತ್ತಿದ್ದ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿಗೆ ಹೆರಿಗೆ ನೋವು ಕಾಣಿಸಿಕೊಂಡಿದ್ದು, ಅದೇ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮೂವರು ವೈದ್ಯಕೀಯ ವಿದ್ಯಾರ್ಥಿನಿಯರು ನೋವಿನಿಂದ ಬಳಲುತ್ತಿದ್ದ ಗರ್ಭಿಣಿಗೆ ಹೆರಿಗೆ ಮಾಡಿಸಿ ಸಮಯಪ್ರಜ್ಞೆ ಮೆರೆದಿದ್ದಾರೆ.

ನಗರದ ತಣ್ಣೀರುಹಳ್ಳದಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಮಾನಸರೋಗ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿನಿಯರಾದ ಡಾ.ರಶ್ಮಿ ಬಿಳಗಿ, ಡಾ. ಲತಾಶ್ರೀ ಹಾಗೂ ಡಾ. ಎಂ.ಶಾಹಿನ್ ಅವರು ರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಹಾಸನದಿಂದ ವಾರಣಾಸಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು.

ಇದೇ ರೈಲಿನಲ್ಲಿ ಗರ್ಭಿಣಿ ಪ್ರಯಾಣಿಸುತ್ತಿದ್ದು, ಈ ವೇಳೆ ರೈಲಿನಲ್ಲೇ ಹೆರಿಗೆ ನೋವು ಕಾಣಿಸಿಕೊಂಡಿದೆ. ಆಸ್ಪತ್ರೆಗೆ ಹೋಗಲು ಸಮಯಾವಕಾಶ ಕಡಿಮೆಯಿದ್ದು ಮಹಿಳೆ ಹಾಗೂ ಮಗುವಿನ ಜೀವಕ್ಕೆ ತೊಂದರೆ ಆಗುವ ಆತಂಕ ಎದುರಾಗಿದ್ದು, ಕೂಡಲೇ ಗರ್ಭಿಣಿ ಬಳಿ ಬಂದು ಮೂವರು ಆಯುರ್ವೇದ ವೈದ್ಯರು ಆರೋಗ್ಯ ತಪಾಸಣೆ ನಡೆಸಿದ್ದು, ಮಗುವಿನ ಕುತ್ತಿಗೆಗೆ ಬಳ್ಳಿ ಸುತ್ತಿಕೊಂಡಿರುವುದು ಗೊತ್ತಾಗಿದೆ. ಕೂಡಲೇ ಬಳ್ಳಿಯನ್ನು ಬಿಡಿಸಿ ಮಗುವನ್ನು ಸುರಕ್ಷಿತವಾಗಿ ಹೊರತೆಗೆಯುವ ಮೂಲಕ ರೈಲಿನಲ್ಲೇ ಯಶಸ್ವಿಯಾಗಿ ಹೆರಿಗೆ ಮಾಡಿಸಿ ಮಾನವೀಯತೆ ಹಾಗೂ ಸಮಯಪ್ರಜ್ಞೆ ಮೆರೆದಿದ್ದಾರೆ. ತಾಯಿ ಮತ್ತು ಮಗವಿನ ಆರೋಗ್ಯ ಉತ್ತಮವಾಗಿದ್ದು ಮೂವರು ಮಹಿಳಾ ವೈದ್ಯರ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ

# ಮದ್ಯ ಸೇವಿಸಿ ಕಾರು ಚಾಲನೆ: ಇಬ್ಬರಿಗೆ ಗಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಂಠಪೂರ್ತಿ ಮದ್ಯ ಸೇವನೆ ಮಾಡಿ ಕಾರು ಚಾಲನೆ ಮಾಡುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಇಬ್ಬರಿಗೆ ಗಂಭೀರವಾಗಿ ಗಾಯಗೊಂಡು, ಒಬ್ಬ ಪವಾಡ ಸದೃಶ ರೀತಿಯಲ್ಲಿ ಪಾರಾದ ಘಟನೆ ತಾಲ್ಲೂಕಿನ ಮುದ್ದೇನಹಳ್ಳಿ ಗ್ರಾಮದ ಬಳಿ ನಡೆದಿದೆ. ಶ್ರೀನಿವಾಸ್ (21) ಗಂಭೀರವಾಗಿ ಗಾಯಗೊಂಡ ಯುವಕ.

ಪುರದಮ್ಮ ದೇವಾಲಯದ ಕಡೆಯಿಂದ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ, ರಸ್ತೆ ಬದಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರು ನಜ್ಜುಗುಜ್ಜಾಗಿದೆ. ಕಾರಿನಲ್ಲಿ ಸಿಲುಕಿದ್ದ ಇಬ್ಬರನ್ನು ಹೊರತೆಗೆದ ಸ್ಥಳೀಯರು, ನಂತರ ಆ್ಯಂಬುಲೆನ್ಸ್‌ನಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜು. 12 ರಂದು ಡಾ.ವೈ.ಎಸ್.ವೀರಭದ್ರಪ್ಪಗೆ ನಾಗರಿಕ ಅಭಿನಂದನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಹಿರಿಯ ಸಾಮಾಜಿಕ ಹೋರಾಟಗಾರ ಡಾ.ವೈ.ಎಸ್.ವೀರಭದ್ರಪ್ಪ ಅವರ ಜೀವನ ಚರಿತ್ರೆ, ಸೇವಾರತ್ನ ಕೃತಿ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭ ಜು.12 ರಂದು ನಡೆಯಲಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಚ್.ಎಲ್. ಮಲ್ಲೇಶಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಅಂದು ಬೆಳಿಗ್ಗೆ 10.30ಕ್ಕೆ ನಗರದ ಎಂ.ಜಿ.ರಸ್ತೆಯಲ್ಲಿ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ವಿಶೇಷ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಕಸಾಪ, ಸ್ಕೌಟ್ ಅಂಡ್ ಗೈಡ್, ಸಂಜೀವಿನಿ ಸಹಕಾರ ಆಸ್ಪತ್ರೆ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಸೇರಿ ಹತ್ತಾರು ಸಂಘಟನೆಗಳು ಕೈಜೋಡಿಸಿವೆ ಎಂದು ವಿವರಿಸಿದರು.

ವೀರಭದ್ರಪ್ಪ ಅವರು ಜನಪರ ಹೋರಾಟಗಾರರು, ಎಷ್ಟೋ ಸಂದರ್ಭದಲ್ಲಿ ಏಕಾಂಗಿಯಾಗಿಯೂ ಹೋರಾಟ ಮಾಡಿದ್ದಾರೆ. ಅನೇಕರು ಹಿಂದೆ ಸರಿದ ವೇಳೆಯಲ್ಲೂ ಇವರು ಮುನ್ನುಗ್ಗಿ ನಿಷ್ಠೆಯಿಂದ ಚಳವಳಿ ಮಾಡುವ ಮೂಲಕ ಅದನ್ನು ದಡ ಮುಟ್ಟಿಸುವ ಕೆಲಸ ಮಾಡಿದ್ದಾರೆ.




ವೈ.ಎಸ್.ವೀ ಅವರು ಸಾಮಾಜಿಕ ಹೋರಾಟಗಾರರು ಅಷ್ಟೇ ಅಲ್ಲ, ಸಮಾಜದ ಸುತ್ತಲಿನ ಬದುಕು ನೇರ್ಪಾಗಲು ಶ್ರಮಿಸುವ ಮೂಲಕ ಮಾದರಿ ಎನಿಸಿಕೊಂಡಿದ್ದಾರೆ. ಇದೀಗ ಅವರಿಗೆ ಇಳಿ ವಯಸ್ಸು, ಅವರ ಹೋರಾಟದ ಹಾದಿ, ಜೀವನಗಾಥೆಯನ್ನು ಲೇಖಕಿ ವನಜಾ ಸುರೇಶ್ ಅರ್ಥಪೂರ್ಣವಾಗಿ ಪುಸ್ತಕ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಸೇವಾ ರತ್ನ ಕೃತಿಯನ್ನು ಅವರ ಕುಟುಂಬದವರೇ ಬಿಡುಗಡೆ ಮಾಡಲು ಮುಂದಾಗಿದ್ದರು. ಆದರೆ ಹತ್ತಾರು ಸಂಘಟನೆಗಳು ಒಗ್ಗೂಡಿ ಈ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಬೇಕು.

ಹಿರಿಯ ಜೀವಕ್ಕೆ ಹೃದಯಪೂರ್ವಕ ಅಭಿನಂದನೆ ಸಲ್ಲಿಸುವ ಕೆಲಸ ಆಗಬೇಕು ಎಂದು ನಿರ್ಧರಿಸಿ ಒಂದೊಳ್ಳೆ ಕಾರ್ಯಕ್ರಮ ಮಾಡಲು ಎಲ್ಲ ಸಿದ್ಧತಾ ಕಾರ್ಯ ಭರದಿಂದ ನಡೆದಿವೆ ಎಂದು ತಿಳಿಸಿದರು.

ಮೈಸೂರಿನ ಸುತ್ತೂರು ಮಹಾ ಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಹಾರನಹಳ್ಳಿ ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿ, ಹಾಸನ-ಕೊಡಗು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಡಾ.ನಿಶ್ಚಲಾನಂದನಾಥ ಮಹಾಸ್ವಾಮೀಜಿ ಮತ್ತು ಹಾಸನದ ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು ಎಂದು ವಿವರಿಸಿದರು.

ನಾಡಿನ ಚಿಂತಕ, ಮಾಜಿ ಸಚಿವರು ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಅಭಿನಂದನಾ ನುಡಿಗಳನ್ನಾಡುವರು ಎಂದರು.

ಸಂಸದ ಶ್ರೇಯಸ್ ಎಂ.ಪಟೇಲ್ ಉದ್ಘಾಟನೆ ನೆರವೇರಿಸಲಿದ್ದು, ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಎಲ್ಲ ಹಾಲಿ ಹಾಗೂ ಮಾಜಿ ಶಾಸಕರು ಹಾಗೂ ಸಾರ್ವಜನಿಕರು ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಹುಡಾ ಮಾಜಿ ಅಧ್ಯಕ್ಷ ಬಿ.ಕೆ.ಮಂಜುನಾಥ್ ಮಾತನಾಡಿ, ಇಡೀ ಜಿಲೆಯಲ್ಲಿ ವೀರಭದ್ರಪ್ಪ ಅವರು ಭಾಗಿಯಾಗದ ಸಂಘ, ಹೋರಾಟಗಳಿಲ್ಲ. ಹಲವು ವರ್ಷ ಸಾರ್ವಜನಿಕ ಸೇವೆ ಮಾಡಿದ್ದಾರೆ. ಹಾಗಾಗಿ ಎಲ್ಲರೂ ಕಾರ್ಯಕ್ರಮಕ್ಕೆ ಬರುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದು ಮನವಿ ಮಾಡಿದರು.

ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ರವಿ ನಾಕಲಗೂಡು ಮಾತನಾಡಿ,ಇದು ಜಾತ್ಯಾತೀತ,ಪಕ್ಷಾತೀತ ಕಾರ್ಯಕ್ರಮ. 50 ವರ್ಷಗಳ ಎಲ್ಲರ ದನಿಯಾಗಿರುವ ಹಿರಿಯರು, ಒಂದು ಸಮಾಜಕ್ಕೆ ಸೀಮಿತ ಆಗಿಲ್ಲ. ಹಾಗಾಗಿ ಅವರಿಗೆ ಆತ್ಮೀಯ ಗೌರವ ಸಲ್ಲಿಸುವ ಕೆಲಸ ಮಾಡೋಣ. ಬರುವ ಎಲ್ಲರಿಗೂ ಅವರ ಕುಟುಂಬದವರೇ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದ್ದಾರೆ ಎಂದರು.

ಲೇಖಕಿ ವನಜಾ ಸುರೇಶ್ ಮಾತನಾಡಿ, ಹಿರಿಯರ ಸಾಧನೆ, ಅವರು ಮಾಡಿರುವ ಕೆಲಸ ಕಾರ್ಯ ಇಂದು ಮತ್ತು ನಾಳಿನ ಕಿರಿಯರಿಗೆ ಉಳಿಯಲಿ ಎಂದು ಪುಸ್ತಕ ರೂಪದಲ್ಲಿ 470 ಪುಟಗಳ ಹೊತ್ತಗೆ ಹೊರ ತರಲಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಐಸಾಮಿಗೌಡ, ನವಿಲೆ ಪರಮೇಶ್, ಕಟ್ಟಾಯ ಶಿವಕುಮಾರ್, ವೈ.ಎಸ್. ವೀರಭದ್ರಪ್ಪ ಅವರ ಪುತ್ರಿ ಗಂಧನಾ ಇದ್ದರು.

# 14 ಗ್ರಾಂ ತೂಕದ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು 14 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ರಾಮಕೃಷ್ಣಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೃಷ್ಣಪ್ಪ ಅವರು ಮದುವೆ ನಿಮಿತ್ತ ಕುಟುಂಬ ಸಮೇತ ಜು. 4 ರಂದು ಮನೆಗೆ ಬೀಗ ಹಾಕಿಕೊಂಡು ಬೆಂಗಳೂರಿಗೆ ತೆರಳಿದ್ದರು. ಜು. 6ರಂದು ವಾಪಾಸ್ ಬಂದಾಗ ಬಾಗಿಲು ಮುರಿದಿರುವುದು ತಿಳಿದಿದೆ. ಮನೆಯ ಬಾಗಿಲಿಗೆ ಹಾಕಿದ್ದ ಬೀಗ ಹಾಗೂ ಬೀರುವಿನ ಬಾಗಿಲನ್ನು ಯಾವುದೋ ಆಯುಧದಿಂದ ಒಡೆದು ಚಿನ್ನಾಭರಣ ಕದ್ದಿದ್ದಾರೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜು. 12ಕ್ಕೆ ಹ್ಯಾರನೆ ಗ್ರಾಮದಲ್ಲಿ ಅಂಬೇಡ್ಕರ್ ಭವನ ಉದ್ಘಾಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಕಟ್ಟಾಯ ಹೋಬಳಿ ಹ್ಯಾರಾನೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಜು.12 ರಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಉದ್ಘಾಟಿಸಲಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಅಂಬೇಡ್ಕರ್ ಭವನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಲೂರು-ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ವಹಿಸುವರು.

ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಹಾಸನ ಶಾಸಕ ಹೆಚ್.ಪಿ.ಸ್ವರೂಪ್, ಹಾಸನ ಜಿಪಂ ಮಾಜಿ ಅಧ್ಯಕ್ಷ ಎಸ್.ದ್ಯಾವೇಗೌಡ, ಚನ್ನಂಗಿಹಳ್ಳಿ ಗ್ರಾಪಂ ಅಧ್ಯಕ್ಷೆ ವೀಣಾ ಹೆಚ್.ಕೆ.ಶಿವಣ್ಣ, ಹಾಸನ ಹಾಲು ಒಕ್ಕೂಟದ ನಿರ್ದೇಶಕರಾದ ಎನ್.ಸಿ.ನಾರಾಯಣಗೌಡ, ದೊಡ್ಡ ಬೀಕನಹಳ್ಳಿ ಪ್ರಾ.ಕೃ.ಪ.ಸ.ಸಂ.ನಿ. ಅಧ್ಯಕ್ಷ ನಾಗರಾಜ್, ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎನ್.ನಂಜುಂಡೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷ ಹೆಚ್.ಕೆ.ಶಿವಣ್ಣ, ಚನ್ನಂಗಿಹಳ್ಳಿ ಗ್ರಾಪಂ ಉಪಾಧ್ಯಕ್ಷ ರಮೇಶ್, ಹ್ಯಾರಾನೆ-ಬಾಚೀಹಳ್ಳಿ ಗ್ರಾಪಂ ಸದಸ್ಯ ಬಿ.ಆರ್.ಜಯಕುಮಾರ್ ಮೊದಲಾದವರು ಹಾಗೂ ಸುತ್ತಮುತ್ತಲ ಗ್ರಾ.ಪಂ ಗಳ ಮಾಜಿ ಅಧ್ಯಕ್ಷರು ಮತ್ತು ಸದಸ್ಯರು ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಜುಲೈ-10

1940: ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬ್ರಿಟನ್ ಯುದ್ಧ ಆರಂಭವಾಯಿತು.

1962: ಜಗತ್ತಿನ ಮೊದಲ ಸಂವಹನ ಉಪಗ್ರಹ ಟೆಲ್ಸ್ಟಾರ್ 1 ಅನ್ನು ಉಡಾವಣೆ ಮಾಡಲಾಯಿತು.

1973: ಬಹಾಮಾಸ್ ದೇಶವು ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದಿತು.

2006: ಸಾಮಾಜಿಕ ಜಾಲತಾಣ ಟ್ವಿಟರ್ ಅಧಿಕೃತವಾಗಿ ಆರಂಭವಾಯಿತು.

### ಜನನ

1856: ನಿಕೋಲಾ ಟೆಸ್ಲಾ, ವಿಜ್ಞಾನಿ ಮತ್ತು ವಿದ್ಯುತ್ ಇಂಜಿನಿಯರ್

1871: ಮಾರ್ಸೆಲ್ ಪ್ರೂಸ್ಟ್, ಖ್ಯಾತ ಸಾಹಿತಿ

1949: ಸುನೀಲ್ ಗವಾಸ್ಕರ್, ಭಾರತದ ಕ್ರಿಕೆಟ್ ದಿಗ್ಗಜ

### ನಿಧನ

1989: ಮೆಲ್ವಿನ್ ಕ್ರಾಂಜ್‌ಬರ್ಗ್, ತಂತ್ರಜ್ಞಾನ ಇತಿಹಾಸಕಾರ

# ಹೆದ್ದಾರಿಯೆಂಬ ಹೆಬ್ಬಾವು-8

**ಗ್ರಾಮಾಯಣ**

**ಧನಂಜಯ ಜೀವಾಳ ಬಿ.ಕೆ.**

ಅಷ್ಟರಲ್ಲಿ ನನ್ನ ತಮ್ಮ ಪಾಪಣ್ಣ ಜಬ್ಬ ಅಲ್ನೋಡು ಎಂದು ಜೋರಾಗಿ ಕೂಗಿದ. ಹಳ್ಳ ಹರಿದಂತೆಲ್ಲಾ ಹಳ್ಳದುದಕ್ಕೂ ಅಸಂಖ್ಯಾತ ಕಲ್ಲೇಡಿಗಳು ನಮ್ಮೆಡೆಗೆ ಧಾವಿಸಿ ಬರುತ್ತಿದ್ದವು. ನೀರಿಗೆ ಸೇರಿದ ಆಮೆಯ ರಕ್ತದ ವಾಸನೆಯ ರುಚಿಗೆ ಕಲ್ಲುಗಳ ಸಂದಿ, ಸೆತ್ತೆಯ ಅಡಿಯಲ್ಲಿ ವಾಸವಾಗಿದ್ದ ನೂರಾರು ಕಲ್ಲೇಡಿಗಳು ಒಂದರ ಮೇಲೊಂದು ಬಿದ್ದು ಅಡ್ಡಡ್ಡಲಾಗಿ ವಿಚಿತ್ರವಾಗಿ ಚಲಿಸುತ್ತಾ ಆಮೆ ಮಾಂಸದ ಭಕ್ಷಣೆಗೆ ಕಾತರಿಸುತಿದ್ದವು. ಜಬ್ಬ ಹಳ್ಳದುದ್ದಕ್ಕೂ ಕಾಣಿಸಿಕೊಂಡ ಅಪಾರ ಪ್ರಮಾಣದ ಕಲ್ಲೇಡಿಗಳನ್ನು ನೋಡಿ ಡಬಲ್‌ಧಮಾಕ ಲಾಟರಿ ಹೊಡೆದವನಂತೆ ಅಣಾಯರೇ ಹಿಡ್ಕಳೀ! ಹಿಡ್ಕಳೀ! ಎಂದು ಕವಚ ತೆಗೆದ ಮಾಂಸದ ಮುದ್ದೆಗೆ ನಾಲ್ಕು ಕಾಲುಗಳನ್ನು ಜೋಡಿಸಿದಂತಿದ್ದ ಆಮೆಯ ಕಳೇಬರವನ್ನು ನನ್ನ ಕೈಗೆ ವರ್ಗಾಯಿಸಿಯೇಬಿಟ್ಟಿದ್ದ.

ಅದನ್ನು ನಾನು ಸಹಜವೆಂಬಂತೆ ಆ ಗಡಿಬಿಡಿಯಲ್ಲಿ ಕೈಗೆ ತೆಗೆದುಕೊಂಡಿದ್ದೆ. ನನಗೆ ಕೈಯಲ್ಲಿರೋದು ಏನೆಂದು ಅರಿವಾದೊಡನೆಯೇ ಹಾತರಿಸಿಕೊಂಡು ಆಮೆಯ ಮೃತದೇಹವನ್ನು ಹಾಗೆಯೇ ನೆಲಕ್ಕೆ ಬೀಳಿಸಿದೆ. ಅಯ್ಯೋ ಇದೇನಿದು? ಎಂದವನೇ ವಾಪಸು ಓಡಿಬಂದು ಮರಳಿನ ಮೇಲೆ ತೊಪ್ಪೆಯಂತೆ ಬಿದ್ದಿದ್ದ ಮಾಂಸದ ಮುದ್ದೆಯನ್ನು ಒಂದು ಚೀಲದೊಳಗೆ ಹಾಕಿದವನೇ, ಪಕ್ಕದಲ್ಲಿದ್ದ ಗಿಡವೊಂದರ ಕೊನೆಯೊಂದನ್ನು ಕತ್ತಿಯಿಂದ ಕತ್ತರಿಸಿ ಚೀಲವನ್ನು ಆ ಕಡಿತದ ಕೊಕ್ಕೆಗೆ ತೂಗುಹಾಕಿದವನೇ, ಬಿಟ್ಟರೆ ಕೆಟ್ಟೆ ಎಂದು ಕೈ ಹಾಕಿದೆಡೆಯಲೆಲ್ಲಾ ಇದ್ದ ಏಡಿಗಳನ್ನು ಹಿಡಿಯುವುದು, ಕೊಂಬು, ಕುರ್ಜಲುಗಳನ್ನು ಲರ್ಕಲರ್ಕನೇ ಮುರಿದುಹಾಕತೊಡಗಿದ. ಸುತ್ತಲೂ ಹರಿದಾಡುತ್ತಿದ್ದ ಅಸಂಖ್ಯ ಏಡಿಗಳನ್ನು ಕಂಡು ನಮ್ಮತ್ತ ತಿರುಗಿ ನೋಡಲೂ ಸಮಯವಿಲ್ಲದಂತೆ ಸುಮಾರು ಅರ್ಧ ಗಂಟೆಯಲ್ಲಿ ನಿರಾಯಾಸವಾಗಿ ಒಂದು ಕೊಡದ ಭರ್ತಿ ಏಡಿಗಳನ್ನು ತುಂಬಿಸಿಯೇಬಿಟ್ಟ. ಇನ್ನೂ ಅಪಾರ ಪ್ರಮಾಣದ ಏಡಿಗಳು ಹಳ್ಳದಲ್ಲಿ ನಮ್ಮ ಕಣ್ಣೆದುರಿನಲ್ಲಿಯೇ ಹರಿದಾಡುತ್ತಿದ್ದವು.

ಕಲ್ಲೇಡಿ ತುಂಬಿದ್ದ ಕೊಡ ಹಾಗೂ ಆಮೆ ಮಾಂಸದ ಮುದ್ದೆಯನ್ನು ಹೊರಲಾರದೇ ಹೊತ್ತುಕೊಂಡು ಬರುತ್ತಿದ್ದ ಜಬ್ಬನನ್ನು ನಾನು ಬಹುದಿನದಿಂದ ಕೇಳಲೇಬೇಕೆಂದುಕೊಂಡಿದ್ದ ಪ್ರಶ್ನೆಯನ್ನು ಕೇಳಿದೆ, ಅಲ್ಲಾ ಮಾರಾಯಾ, ನಿನ್ನ ಹೆಸರನ್ನು ಯಾರಿಟ್ಟದ್ದು ಜಬ್ಬ ಅಂತ ಅಂದೆ. ನಮ್ಮ ಕಡೆ ಅದೇ ತರದ ಹೆಸರು ಇಡೋದು ಅಣ್ಣಯ್ಯರೇ ದೂಜ, ಕೂರ, ಮತೋಡಿ ಅಂತ. ಅಯ್ನೋರಿಗೋ, ಭಟ್ಟರಿಗೋ, ತೋಟದ ಸಾವ್ಕಾರ್ರಿಗೋ ತಿಳಿದಿರುತ್ತೆ ಅಂತ ಕೇಳಿದ್ರೆ, ಅವರು ನಮಗೆ ಹೇಳೋದೆ ಇಂಥದನ್ನು, ಇದಕ್ಕಿಂತ ಉತ್ತಮವಾದವು ಎಂದರೆ ಕುಜುಮ, ಮಾಟ, ದೊಂಕ, ಮೊಗ, ಮುಂಡೇಡಿ ಬರೀ ಇದೇಯಾ! ನಮ್ಮುನ್ನೆಲ್ಲಾ ನೋಡಿದ್ರೆ, ನಾವೆಲ್ಲಾ ಇಂಥ ಹೆಸ್ರಿಗೆ ಸರಿಯಾದವ್ರು ಅನ್ಸುತ್ತೋ ಏನೊ? ಈ ಉತ್ತಮರಿಗೆ, ಇವ್ರ ಮನೆ ಮಕ್ಳಿಗೆ ಮಾತ್ರ ಶ್ರೀನಿವಾಸಮೂರ್ತಿ, ಶಂಕರ, ವಿಷ್ಣುಪ್ರಸಾದ, ನಾರಾಯಣ, ದಿನಕರ, ಬಸವರಾಜ, ಎಂಥಾ ಮನುಷ್ರಪ್ಪಾ, ಬುಡಿ, ಈಗ ಆಗೋಯ್ತುಲ್ಲ.

ಇವ್ರುಗಳು ಮಾತ್ರ ಮೂರ್ತಿ, ಪ್ರಸಾದ, ನಾವೆಲ್ಲಾವನೂ ಹಿಕ್ಕೆ ಮಾತ್ರನಾ? ಹೆಸರಿಡುವ ಮೂಲದಲ್ಲೆ ನಮಗೆ ಬತ್ತಿಯಿಡೋರು ಜೀವನ ಪರ್ಯಂತ ಆ ಹೆಸರಿನ ನೆಪದಲ್ಲಿ ಕೀಳರಿಮೆಯಿಂದ ಬದುಕುವಂತೆ ಮಾಡ್ತಾರೆ. ನಾವೆಲ್ಲಾದ್ರೂ, ಬಸವರಾಜ ಅಂತ ಹೆಸರಿಟ್ಟುಕಂಡ್ರೆ, ಅದನ್ನೂ ಬಾಸ ಮಾಡ್ತಾರೆ. ದೇವರಾಜನ ದ್ಯಾವ ಅಂತಾರೆ, ಸುಬ್ರಮಣಿ ಸುಬ್ಬ ಆಗ್ತಾನೆ. ಸ್ವಲ್ಪ ಒಗೆದು, ತೊಳೆದು, ಇಸ್ತ್ರಿ ಮಾಡಿ ಬಟ್ಟೆ ಹಾಕಂಗೆ ಇಲ್ಲ. ಕ್ರಾಪ್ ಕಟಿಂಗ್ ಮಾಡಿದ್ರೆ, ಒಂದಷ್ಟು ಬೆಲೆಬಾಳೋ ಚಪ್ಪಲಿ ಹಾಕಿದ್ರೂ, ಗಂಟಲೊಳಗೇ ಉಮ್!! ಉಮ್!! ಅಂತಾ ಅಂದು ಸುಮ್ಮನೇ ಗುರ್ರ್ ಗುರ್ರಾಯಿಸುವಂತೆ ದನಿ ಸಗರುತ್ತಾರೆ. ನಮ್ ಮಕ್ಳು ಹುಟ್ಟಿರೋದೆ ನಮ್ಮಂಗೆ ಇವರ್ಮನೆ ಜೀತ ಮಾಡೋಕ್ಕೇಂತ ಅಂದ್‌ಕಂಡೀದಾರೆ. ಇಸ್ಕೂಲಿಗೆ ಹೋಗ್ಬಾರ್ದು, ಹೋಗಿ ಕೆಲಸಕ್ಕೆ ಸೇರಿಕಂಬಿಟ್ರೆ ಇವರ್ಮನೆ ಚಿಗುರು, ಅಗತೆ, ಗೊಬ್ಬರ, ಹಳ, ಕಳೆಗೆ ಜನಾ ಕಡಿಮೆಯಾಗ್ತಾರಲ್ಲಾ ಎಂದು ಶತಶತಮಾನಗಳ ಆಕ್ರೋಶವನ್ನು ಹೊರಹಾಕಲು ಕಾದ್ದಿನೇನೋ ಎಂಬಂತೆ ತನ್ನ ಸಿಟ್ಟನ್ನು ಹೊರಚೆಲ್ಲಿದ್ದ ಜಬ್ಬ.

ಮೋಣು - 1

ಮೊಲಕ್ಕೆ ಬಲೆ ಹಾಕಿದ್ದ ದೇವಪ್ಪ ತನ್ನ ಬಳಿಯಿದ್ದ ಗೋಣಿಚೀಲದೊಳಗೆ ಈಗಾಗಲೇ ಹಿಡಿದಿದ್ದ ಮೊಲವೊಂದನ್ನು ಹಿಂಗಾಲುಗಳನ್ನು ಹಿಡಿದೆತ್ತಿ ಹೊರತೆಗೆದು ತೋರಿಸಿದ. ಬೆಳಿಗ್ಗೆ- ಸಂಜೆ ಹೀಗೆ ದಿನಕ್ಕೆರಡು ಬಾರಿ ಬಲೆಯಲ್ಲಿ ಬಿದ್ದಿರಬಹುದಾದ ಪ್ರಾಣಿಗಳನ್ನು ತೆಗೆದುಕೊಂಡು ಹೋಗಲು ಬರುವ ದೇವಪ್ಪ ನನಗೆ ರೈಲ್ವೇ ಹಾದಿಗೆ ಹೋಗುವ ದಾರಿಯೆಂದು ಆ ಈಚಲಹರದಲ್ಲಿ ಹಾಗೇ ಹಾವಿನಂತೆ ಗುತ್ತಿಗುತ್ತಿಗಳನ್ನು ಸುತ್ತಿ ಹೋಗುವ ದಾರಿಯೊಂದನ್ನು ತೋರಿಸಿ, ದಾರಿ ನೋಡಿಕೊಂಡು ಹೋಗಿ ಅಲ್ಲಲ್ಲಿ ಬಲೆಗಳಿರ್ತವೆ ಎಂದ.

ಈಚಲ ಮರದಲ್ಲಿ ಮಾರ್ಗದರ್ಶಕನಾಗಿ ನನಗೆ ಸಿಕ್ಕಿದ ದೇವಪ್ಪನ ಹತ್ತಿರ ಹೆದ್ದಾರಿ ಪಕ್ಕದ ತಗಡಿನ ಬಾಗಿಲಿನ ಶೆಡ್ಡಿನ ಮನೆಯ ಮಲೆಯಾಳಿಯ ವಿಚಾರ ಪ್ರಸ್ತಾಪಿಸಿ, ಅಲ್ಲಾರೀ, ದೇವಪ್ಪಾ; ಹಿಂದೆ ಮುಂದೆ ನಿರಂತರ ಕಾಡಿರುವಲ್ಲಿ ಆ ಮನುಷ್ಯ ಏನು ಮಾಡ್ತಾ ಇದ್ದಾನೆ ಇಬ್ಬರು ಹೆಂಗಸರನ್ನಿಟ್ಟುಕೊಂಡು ಎಂದೆ. ಓ ಕುಂಯಿಮೋಣುವಿನ ವಿಚಾರಾನಾ? ಅವನೇನೂ ಇಲ್ಲಿಗೆ ಹಳಬನಲ್ಲ ನಾಲ್ಕು ವರ್ಷ ಆಯಿತಷ್ಟೆ ಇಲ್ಲಿಗೆ ಬಂದು. ಕೇರಳದ ಬದುಕಿನ ಒತ್ತಡ ತಾಳಲಾರದೆ ಶುಂಠಿ ಬೆಳೆಯಲು ಇಲ್ಲಿಗೆ ಬಂದ. ಮಂಜಯ್ಯನ ಗದ್ದೇನ ಒಂದು ಬೆಳೆಗೆ ಎಕರೆಗೆ ಮೂರು ಸಾವಿರ ರೂಪಾಯಿಯಂತೆ ಆರು ಎಕರೆ ಗದ್ದೆಯನ್ನ ಗುತ್ತಿಗೆಗೆ ತೆಗೆದುಕೊಂಡ. ಗದ್ದೆ ಏರಿಮೇಲೆ ಗುಡಾರ ಹಾಕಿಕೊಂಡು ಸಾವಿರಾರು ಖರ್ಚು ಮಾಡಿ ಕೆಲಸಗಾರರನ್ನು ಸಹಾ ಕೇರಳದಿಂದಲೇ ಕರೆಸಿ, ತನಗೇ ಅಚ್ಚರಿಯಾಗುವಂಥಾ ಅದ್ಭುತವಾದ ಬೆಳೆ ತೆಗೆಯುವುದೇ? ಸುತ್ತಮುತ್ತಲಿನ ಜಮೀನಿನವರು



ಅಸೂಯೆಯಿಂದ ನೋಡುವಂತೆ ಶುಂಠಿ ಬೆಳೆಯನ್ನು ಬೆಳೆದ. ಕಳೆದ ಮೂರು ವರ್ಷಗಳಿಂದ ಇದೇ ರೀತಿ ಅಲೆಮಾರಿ ರೈತನಾಗಿ ಗದ್ದೆಯನ್ನು ಗುತ್ತಿಗೆಗೆ ಹಿಡಿದು ಶುಂಠಿ ಬೆಳೆ ಮಾಡಿ ಕೇರಳದ ಬಡಗರದಲ್ಲಿದ್ದ ಹೆಂಡತಿಯ ಕಡೆಯಿಂದ ಬಳುವಳಿಯಾಗಿ ಸಿಕ್ಕಿದ್ದ ಮನೆ-ಮಠವನ್ನೆಲ್ಲಾ ಮಾರಿ, ಕಳೆದುಕೊಂಡದನ್ನೆಲ್ಲಾ ಕಳೆದುಕೊಂಡಲ್ಲೇ ಹುಡುಕಬೇಕೆಂದು ಹುಚ್ಚು ಆವೇಶದಲ್ಲಿ ಮಂಜಯ್ಯನ ಗದ್ದೆಗೆ ಎಕರೆಗೆ ಆಗಿನ ಗುತ್ತಿಗೆ ದರದಲ್ಲೆ ಹೆಚ್ಚೆನಿಸುವ ಎಕರೆಗೆ ಮೂರು ಸಾವಿರ ಕೊಟ್ಟು, ಬದುಕಿದರೆ ಇದರಿಂದಲೇ ಎಂದು ನಿರ್ಧರಿಸಿದ್ದ. ದೇವರೇ ಗತಿ ಎಂಬಂತೆ ಇಂದೇ ನನ್ನ ಕೊನೆಯ ದಿನ ಎಂದು ಅವುಡುಗಚ್ಚಿಕೊಂಡು ಹೆಂಡತಿ-ಮಗಳು, ಕೆಲಸಗಾರರೊಡನೆ ಸೇರಿ ಮೈಯಲ್ಲಿದ್ದ ಮಾಂಸವೆಲ್ಲಾ ಕರಗುವಂತೆ ಬೆಳಿಗ್ಗೆ ಐದೂವರೆಯಿಂದ ಸಂಜೆ ಏಳರವರೆಗೆ ಪುರಸೊತ್ತಿಲ್ಲದಂತೆ ಗೇಯ್ದೂ-ಗೇಯ್ದೂ ಹಣ್ಣಾಗಿ ಹೋಗಿದ್ದ.

ಇತ್ತ ಮಂಜಯ್ಯ; ತನ್ನಲಿದ್ದ ಆರು ಎಕರೆ ಗದ್ದೆಯನ್ನು ಈ ಕುಂಯಿಮೋಣುವಿಗೆ ಗುತ್ತಿಗೆ ಕೊಟ್ಟು ದಿನಾ ಬೆಳಗಾಗೆದ್ದರೆ ಪೇಟೆಗೆ ಹೋಗುವುದು, ಸಂಜೆ ಮನೆಗೆ ಬಂದು ಹೆಂಡತಿ ಎದುರು ತಾನು ದೆಹಲಿಯಲ್ಲಿರುವ ಪಾರ್ಲಿಮೆಂಟ್‌ಗೇ ಹೋಗಿದ್ದಿನೇನೋ ಎಂಬಂತೆ ಬಡಾಯಿ ಬಾರಿಸುತ್ತಿದ್ದ. ತಾಲ್ಲೂಕು ಕೇಂದ್ರವಾಗಿದ್ದ ಮೂಡಿಗೆರೆಯಲ್ಲಿದ್ದ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಒಂದಾದ ನಂತರ ಒಂದಾದಂತೆ ಭೇಟಿ ನೀಡುವುದು, ಕೃಷಿ ಇಲಾಖೆಯಲ್ಲಿ ದೊರೆಯುವ ಸಬ್ಸಿಡಿ, ಸಲಕರಣೆ, ಗೊಬ್ಬರ, ಕೀಟನಾಶಕಗಳನ್ನು ವಿಚಾರಿಸುವುದು, ಸೆಕ್ರೆಟರಿ ಮನೆಗೆ ಹೋಗಿ ಪಹಣಿ ಬರೆಸಿಕೊಂಡು ಬರುವುದು, ಆ ಪಹಣಿ ಲಗತ್ತಿಸಿ ಒಂದು ಅರ್ಜಿ ಕೊಡುವುದು ಮತ್ತೆ ತೋಟಗಾರಿಕಾ ಇಲಾಖೆಗೆ ಹೋಗುವುದು, ಅಲ್ಲಿ ಸಿಗಬಹುದಾದ ಸಪೋಟಾ ಗಿಡ, ತೆಂಗಿನ ಗಿಡಗಳಿಗೆ ಅರ್ಜಿ ಗುಜರಾಯಿಸಿ ಅವನ್ನು ಮಾರಲು ಯಾರಾದರೂ ಗಿರಾಕಿಗಳು ಸಿಗುತ್ತಾರಾ ಎಂದು ಹುಡುಕುವುದು, ಮತ್ತೆ ರೇಷ್ಮೆ ಇಲಾಖೆ, ಕಾಫಿ ಬೋರ್ಡ್, ಸಂಬಾರ ಮಂಡಳಿಗಳಿಗೆ ಭೇಟಿ ನೀಡಿ ಅಲ್ಲಿನ ಸವಲತ್ತುಗಳು, ಸಿಗುವ ಗಿಡಗಳು, ಔಷಧಿಗಳನ್ನು ಪಡೆಯುವ ಬಗೆಯನ್ನು ವಿಚಾರಿಸಿ ಅರ್ಜಿ ಗುಜರಾಯಿಸುವುದು ಮಾಡುತ್ತಿದ್ದ. ಇದನ್ನೆಲ್ಲಾ ಅವನೇನೂ ತನ್ನ ಜಮೀನಿಗೆ ನೆಡಲು, ಉಪಯೋಗಿಸಲು ಬಳಸುತ್ತಿರಲಿಲ್ಲ. ತನಗಿದ್ದ ಮೂರೆಕೆರೆ ಕಾಫಿ ಕಂ ಏಲಕ್ಕಿ-ಅಡಕೆ ತೋಟವನ್ನು ಹಾಳುಬಿಟ್ಟು ವರ್ಷ ಹತ್ತೇ ಕಳೆದಿತ್ತು. ದಿನದ ಹೆಚ್ಚಿನ ಸಮಯದಲ್ಲಿ ಪೂಟ್‌ಲಾಯರಿಕೆ ಮಾಡಿಕೊಂಡು, ಅಲ್ಲಲ್ಲಿ ಪಟ್ಟಾಂಗ ಹೊಡೆದುಕೊಂಡು ಕಾಲಕಳೆಯುತ್ತಿದ್ದ. ತನ್ನಂತೆ ಇದೇ ರೀತಿಯ ಖಯಾಲಿಯನ್ನು ಉದ್ಯೋಗ ಮಾಡಿಕೊಂಡಿದವರನ್ನು ಗೆಳೆಯರನ್ನಾಗಿ ಮಾಡಿಕೊಂಡು ಅಲ್ಲಲ್ಲಿ ಸರ್ಕಾರಿ ಕಛೇರಿಗಳಿಗೆ ಲೋಕಾಯುಕ್ತರಂತೆ ಭೇಟಿ ನೀಡುವ ಕಲೆಯನ್ನು ಮೈಗೂಡಿಸಿಕೊಂಡಿದ್ದ. ಕೆಲ ಸರ್ಕಾರಿ ನೌಕರರನ್ನು, ಅಧಿಕಾರಿಗಳನ್ನು ಹಾಗೂ ಹೀಗೂ ಪುಸಲಾಯಿಸಿ ನಿಜವಾಗಿಯೂ ಕೃಷಿ ಮಾಡಿಕೊಂಡು ಸಬ್ಸಿಡಿ, ಸರ್ಕಾರದ ನೆರವಿನ ಅಗತ್ಯವಿರುವ ಪ್ರಾಮಾಣಿಕ ರೈತರನ್ನು ಈ ಸರ್ಕಾರಿ ಕಛೇರಿಗಳ ಹತ್ತಿರಕ್ಕೂ ಸುಳಿಯದಂತೆ ಮಾಡಿಬಿಟ್ಟಿದ್ದ. ಮೂರೂ ಬಿಟ್ಟವರು ಊರಿಗೇ ದೊಡ್ಡವರು ಅಂತಾರಲ್ಲಾ ಹಾಗೇ ಈ ಸಬ್ಸಿಡಿ ಮಾಫಿಯಾ ನಾಯಕ ಮಂಜಯ್ಯ ಆಯಕಟ್ಟಿನ ಅಧಿಕಾರಿಯನ್ನು ಬುಕ್ ಮಾಡಿಕೊಂಡು, ಅವರಿಗೂ ತಿನ್ನಲು ಬಿಟ್ಟು, ತಾನೂ ನುಂಗಿ, ತನ್ನ ಸಂಗಡಿಗರಿಗೂ ಸಾಕಷ್ಟು ಗಳಿಸಲು ಅವಕಾಶ ಮಾಡಿಕೊಟ್ಟಿದ್ದ. ಸರ್ಕಾರಿ ಲೆಕ್ಕದಲ್ಲಿ ರೈತರಿಗೆ ಸೇರಬೇಕಾಗಿದ್ದ ಲಕ್ಷಗಟ್ಟಲೆ ಮೌಲ್ಯದ ಸವಲತ್ತುಗಳು ಬರೀ ಸಭೆ-ಸಮಾರಂಭಗಳಲ್ಲಿ ಫಲಾನುಭವಿಗಳಿಗೆ ಸಾಂಕೇತಿಕ ಸಹಾಯಧನ, ಪೇಪರ್‌ಗಳಲ್ಲಿ ಸುದ್ದಿ, ಕಛೇರಿಗಳ ಅಂಕಿ ಅಂಶಗಳಿಗೆ ಮಾತ್ರ ಸೀಮಿತವಾಗಿತ್ತು. ಕೆಲ ಸೋಮಾರಿ, ಪೇಟೆ ಸುತ್ತುವ ಖಯಾಲಿಯ ಈ ರೀತಿಯ ಮಂಜಯ್ಯನ ತರಹದ ಸಮಯಸಾಧಕ ಪಾರ್ಟ್‌ಟೈಮ್ ರೈತರು ಇಡೀ ರೈತ ಸಮುದಾಯದ ಪ್ರಾಮಾಣಿಕತೆಯನ್ನೇ ಪ್ರಶ್ನಿಸುವಂತೆ ನಡೆದುಕೊಳ್ಳುತ್ತಿದ್ದರು. ಖದೀಮರು ತಮ್ಮ ಸುತ್ತಾ ಒಂದು ಪರತಂತ್ರಜೀವಿಗಳ ಸಮೂಹವನ್ನೇ ಸೃಷ್ಟಿಸಿಕೊಂಡು ಅವರಿಂದಲೇ ಸಭೆ-ಸಮಾರಂಭಗಳಲ್ಲಿ ಹಾರ-ತುರಾಯಿ, ಪರಾಕುಗಳನ್ನು ಹಾಕಿಸಿಕೊಳ್ಳುವುದು ಶತಶತಮಾನಗಳಿಂದಲೂ ನಡೆದು ಬಂದದ್ದೇ.

(ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248